**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸ್ನಾ. ಸ್ನಾತಕೋ. ಪರೀಕ್ಷೆಗಳು/2017–18 ದಿನಾಂಕ:**13.09.2017**

## ಅಧಿಸೂಚನೆ

**ವಿಷಯ: 2017–18ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಪರಿಸರದಲ್ಲಿ ನಡೆಯಲಿರುವ ಸಂಸ್ಕೃತ ಎಂ.ಎ. ಪ್ರಥಮ ಹಾಗೂ ತೃತೀಯ ಸೆಮಿಸ್ಟರ್ ಹಾಗೂ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಸಂಸ್ಕೃತ ಮಹಾವಿದ್ಯಾಲಯಗಳ ಆಚಾರ್ಯ (ಎಂ.ಎ) ಪ್ರಥಮ ಹಾಗೂ ತೃತೀಯ ಸೆಮಿಸ್ಟರ್ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ.**

| ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ) ಪಡೆಯುವ ದಿನಾಂಕ | ವಿಳಂಬ ಶುಲ್ಕದೊಂದಿಗೆ ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ) ಪಡೆಯುವ ದಿನಾಂಕ | ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ)ಗಳ ಸಹಿತ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ರವಾನಿಸುವ ದಿನಾಂಕ |
|---|---|---|---|
| **28.09.2017** | **03.10.2017** | **07.10.2017** | **13.10.2017** |

**ಸೂಚನೆಗಳು:**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಅಧಿಕೃತ ಮಾನ್ಯತೆ ಪಡೆದ ಖಾಸಗಿ ಹಾಗೂ ಸರ್ಕಾರಿ ಸಂಸ್ಕೃತ ಕಾಲೇಜುಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.
2. ಪರೀಕ್ಷಾ ಶುಲ್ಕದ ಹುಂಡಿ (ಡಿ.ಡಿ.)ಯನ್ನು **"ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು (Finance Officer, Karnataka Samskrit University, Bangalore)"** ಈ ಹೆಸರಿನಲ್ಲಿ ಪಡೆದು ನಿಗಧಿತ ದಿನಾಂಕದಂದು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. ನಿಗಧಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. **ಎಂ.ಎ. ಆಚಾರ್ಯ** (ಸಂಸ್ಕೃತ) ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳು 2016–17ನೇ ಸಾಲಿನಲ್ಲಿರುವ ಹೊಸಪಠ್ಯಕ್ರಮದಂತೆ ನಡೆಯುತ್ತವೆ.
4. ಎಂ.ಎ. ಆಚಾರ್ಯ(ಸಂಸ್ಕೃತ) ಪ್ರಥಮ ಹಾಗೂ ತೃತೀಯ ಸೆಮಿಸ್ಟರ್ ವಿದ್ಯಾರ್ಥಿಗಳು ವಿಶ್ವವಿದ್ಯಾಲಯವು ನೀಡಿರುವ ಅಧಿಕೃತ ನಮೂನೆಯಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು.
5. ಅರ್ಜಿಗಳೊಂದಿಗೆ ಸಲ್ಲಿಸುವ ನಾಮಾಂಕಿತ ಪಟ್ಟಿಯಲ್ಲಿ ಕಾಲೇಜಿನ ಕೇಂದ್ರ ಸಂಖ್ಯೆ, ಕಾಲೇಜಿನ ಹೆಸರು, ಕಾಲೇಜಿನ ಸಂಕೇತ ಸಂಖ್ಯೆ, ಹಾಗೂ ಸಮೀಪದ ಅಂಚೆ ಕಛೇರಿಯ ಪಿನ್‌ಕೋಡ್ ನಂಬರ್‌ಗಳನ್ನು ಸ್ಪಷ್ಟವಾಗಿ ನಮೂದಿಸುವುದು.

6. ಪರೀಕ್ಷೆ ತೆಗೆದುಕೊಳ್ಳುವ ಎಲ್ಲ ಅಭ್ಯರ್ಥಿಗಳಿಂದ ಇತ್ತೀಚಿನ ಎರಡು ಭಾವಚಿತ್ರಗಳನ್ನು ಪಡೆದು ಒಂದನ್ನು ಅರ್ಜಿಗೂ ಮತ್ತೊಂದನ್ನು ಪ್ರವೇಶ ಪತ್ರಕ್ಕೂ ಲಗತ್ತಿಸಿ ಪ್ರಾಚಾರ್ಯರು ದೃಢೀಕರಿಸಿ ಕಳುಹಿಸುವುದು.
7. ಆಚಾರ್ಯ ಪ್ರಥಮ ಸೆಮಿಸ್ಟರ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪ್ರತಿ ಪತ್ರಿಕೆಗೆ 200/–ರೂಗಳ ಪರೀಕ್ಷಾ ಶುಲ್ಕದೊಂದಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವುದು.
8. ಅರ್ಜಿಯಲ್ಲಿ ಕಡ್ಡಾಯವಾಗಿ ತಂದೆ ಹಾಗೂ ತಾಯಿಯ ಹೆಸರನ್ನು ನಮೂದಿಸುವುದು. ಜನ್ಮ ದಿನಾಂಕದ ನಕಲು ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು.
9. ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಾದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿ ಸಮೀಪದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು.
10. **ಆಚಾರ್ಯ ಪ್ರಥಮ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಬಿ.ಎ. ಮೂರು ವರ್ಷದಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಗಳ ನಕಲುಪ್ರತಿ (ಅಂಕಪಟ್ಟಿಗಳು ಇಲ್ಲದಿದ್ದಲ್ಲಿ ದೃಢೀಕೃತ ಫಲಿತಾಂಶ ಪಟ್ಟಿ)ಯನ್ನು ಅರ್ಜಿ ಜೊತೆಗೆ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ. ಆಚಾರ್ಯ ತೃತೀಯ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಆಚಾರ್ಯ ಪ್ರಥಮ ಹಾಗೂ ದ್ವಿತೀಯ ಸೆಮಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಗಳ ನಕಲುಪ್ರತಿ ಪಟ್ಟಿಗಳ ನಕಲುಪ್ರತಿ (ಅಂಕಪಟ್ಟಿಗಳು ಇಲ್ಲದಿದ್ದಲ್ಲಿ ದೃಢೀಕೃತ ಫಲಿತಾಂಶ ಪಟ್ಟಿ)ಯನ್ನು ಅರ್ಜಿ ಜೊತೆಗೆ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**
11. ಹೊರ ರಾಜ್ಯದಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡಿ ಪ್ರಮಾಣ ಪತ್ರವನ್ನು ನೀಡಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪ್ರಮಾಣ ಪತ್ರವು ವಿಶ್ವವಿದ್ಯಾಲಯದ ಪ್ರವೇಶಾರ್ಹತೆಯ ನಿಯಮಾವಳಿಗೆ ಅನುಗುಣವಾಗಿದ್ದಲಿ ಮಾತ್ರ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು, ಅನ್ಯಥಾ ತಿರಸ್ಕರಿಸಲಾಗುವುದು.
12. **ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬಂಧ ಮಾಹಿತಿಗಳನ್ನು Microsoft word, pdf, image ನಲ್ಲಿ ಕಳುಹಿಸಬಾರದು. ಕಡ್ಡಾಯವಾಗಿ ಆಂಗ್ಲಭಾಷೆಯಲ್ಲಿಯೇ Microsoft excel sheet ನಲ್ಲಿ ಕಳುಹಿಸಬೇಕು. Font Name &size- Cambria, 12. ವಿದ್ಯಾರ್ಥಿಗಳ ಮಾಹಿತಿಯನ್ನು ಸಿ.ಡಿಯಲ್ಲಿ ಕಳುಹಿಸುವುದರ ಬದಲಾಗಿ <u>examksu2016@gmail.com</u> ಈ ಇ–ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು. ಮತ್ತು ಪ್ರತಿಯನ್ನು (hard copy) ಪರೀಕ್ಷಾ ನಿಯಂತ್ರಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ–18 ಈ ವಿಳಾಸಕ್ಕೆ ಕಳುಹಿಸುವುದು.**
13. ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿರುವ 2 ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸಬೇಕು.
14. ತರಗತಿವಾರು ಸಿದ್ಧಪಡಿಸಿದ ನಾಮಾಂಕಿತ ಪಟ್ಟಿಯ ಕೊನೆಯಲ್ಲಿ ಆಯಾಯ ಶಾಸ್ತ್ರಭಾಗಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ವರ್ಷ ಹಾಗೂ ಶುಲ್ಕದ ವಿವರಗಳನ್ನು ಸರಿಯಾಗಿ ನಮೂದಿಸುವುದು.

15. ವಿಶ್ವವಿದ್ಯಾಲಯದಿಂದ ನೋಂದಣಿ ಸಂಖ್ಯೆಯನ್ನು ನೀಡಿದ ನಂತರ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪಟ್ಟಿಯನ್ನು ಪ್ರಾಚಾರ್ಯರು ದೃಢೀಕರಿಸಿ ಕಳುಹಿಸಿಕೊಡುವುದು ಆಂತರಿಕ ಮೌಲ್ಯಮಾಪನದ ಅಂಕಗಳಿಲ್ಲದ ಆವೇದನಪತ್ರಗಳನ್ನು ತಿರಸ್ಕರಿಸಲಾಗುವುದು.

16. ತಾವು ಕಳುಹಿಸುವ ನಾಮಾಂಕಿತ ಪಟ್ಟಿಯನ್ನೇ ಅಂತಿಮ ಎಂದು ಪರಿಗಣಿಸಿ ಅಂಕಪತ್ರಗಳನ್ನು ಮುದ್ರಿಸಲಾಗುವುದು. ಆದ್ದರಿಂದ **ನಾಮಾಂಕಿತಪಟ್ಟಿಯಲ್ಲಿ ಅಕ್ಷರ ದೋಷಗಳನ್ನು ಮರುಪರಿಶೀಲಿಸಿ ಕಳುಹಿಸುವುದು ಉಚಿತ.**

17. ತರಗತಿವಾರು ಪರೀಕ್ಷಾ ಶುಲ್ಕವನ್ನು ಈ ಕೆಳಗಿನಂತೆ ತಿಳಿಸಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದ್ದು, ಅನುಬಂಧ–2ರಲ್ಲಿ ತಿಳಿಸಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು. ಪ್ರಮಾಣಪತ್ರಗಳನ್ನು ಸಲ್ಲಿಸದಿದ್ದಲ್ಲಿ ಪೂರ್ಣ ಶುಲ್ಕವನ್ನು ಭರಿಸಬೇಕು. ಇಲ್ಲದಿದ್ದಲ್ಲಿ ಅರ್ಜಿ ತಿರಸ್ಕರಿಸಲಾಗುವುದು.

| **ಕ್ರ.ಸಂ** | **ಪರೀಕ್ಷೆಗಳ ವಿವರ** | **ಪರೀಕ್ಷಾ ಶುಲ್ಕ** | **ಅರ್ಜಿ ಶುಲ್ಕ** | **ಅಂಕಪಟ್ಟಿ ಶುಲ್ಕ** | **ಒಟ್ಟು ಮೊತ್ತ** |
|---|---|---|---|---|---|
| 1 | ಆಚಾರ್ಯ(ಎಂ.ಎ.) I ಮತ್ತು III ನೇ ಸೆಮಿಸ್ಟರ್ | 470.00 | 10.00 | 20.00 | 500.00 |

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ರ ಪರೀಕ್ಷಾ ಶುಲ್ಕದ ವಿವರ ಈ ಕೆಳಕಂಡಂತಿದೆ.

| **ಕ್ರ.ಸಂ** | **ಪರೀಕ್ಷೆಗಳ ವಿವರ** | **ಪರೀಕ್ಷಾ ಶುಲ್ಕ** | **ಅರ್ಜಿ ಶುಲ್ಕ** | **ಅಂಕಪಟ್ಟಿ ಶುಲ್ಕ** | **ಒಟ್ಟು ಮೊತ್ತ** |
|---|---|---|---|---|---|
| 1 | ಆಚಾರ್ಯ(ಎಂ.ಎ.) I ಮತ್ತು III ನೇ ಸೆಮಿಸ್ಟರ್ | - | 10.00 | 20.00 | 30.00 |

ಸಹಿ/–
**ಕುಲಸಚಿವರು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು